**ಪಾಠ–2** **ಅಕ್ಟೋಬರ್ 3–9**

# ಕುಟುಂಬ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಆ.ಕಾ 3:1–15; 2 ಕೊರಿಂಥ 4:6; ಲೂಕ 1:26–38; ಮತ್ತಾಯ 1:18–24; ಎಫೆಸ 4:15; 1 ಯೋಹಾನ 3:18; ಧ.ಕಾ. 6.

**ಸ್ಮರಣವಾಕ್ಯ : "ಮಗನೇ, ನಿನ್ನ ತಂದೆಯ ಉಪದೇಶವನ್ನು ಕೇಳು, ನಿನ್ನ ತಾಯಿಯ ಬೋಧನೆಯನ್ನು ತೊರೆಯಬೇಡ" (ಜ್ಞಾ 1:8).**

ಮಾನವರಾಗಿ ನಾವು ಯಾವಾಗಲೂ (ಆದರ್ಶದಿಂದ) ಕಲಿಯುತ್ತಿರುತ್ತೇವೆ. ಸತ್ಯಾಂಶವೇನೆಂದರೆ : ಜೀವನವೇ ಒಂದು ಶಾಲೆ.

"ಅನಾದಿ ಕಾಲದಿಂದಲೂ ಇಸ್ರಾಯೇಲ್ಯರು ತಮ್ಮ ಯುವಜನತೆಯ ಶಿಕ್ಷಣಕ್ಕೆ ವಿಶೇಷ ಗಮನ ಕೊಟ್ಟುಕೊಂಡೇ ಬಂದಿದ್ದಾರೆ. ದೇವರ ಆಜ್ಞೆಯಲ್ಲಿಯೂ ಮತ್ತು ಇಸ್ರಾಯೇಲ್ಯರ ಇತಿಹಾಸದಲ್ಲಿಯೂ ಪ್ರಕಟಗೊಂಡಿರುವ ದೇವರ ಒಳ್ಳೆಯತನ ಮತ್ತು ದೇವರ ಘನತೆಯನ್ನು, ಶಿಶುಪ್ರಾಯದಿಂದಲೇ ತಮ್ಮ ಮಕ್ಕಳಿಗೆ ಹೇಳಿಕೊಡಬೇಕೆಂದು ಕರ್ತನಾದ ದೇವರು ಮಾರ್ಗದರ್ಶನ ಕೊಟ್ಟಿರುವನು. ಧರ್ಮಶಾಸ್ತ್ರ ಆಧಾರಿತ ಗೀತೆಗಳು ಮತ್ತು ಪ್ರಾರ್ಥನೆಗಳು ಹಾಗೂ ಪಾಠಗಳನ್ನು ತೆರೆದ ಮನಸ್ಸಿಗೆ ಹೊಂದಿಕೊಳ್ಳುವಂತೆ ಮಾಡಬೇಕು. ತಂದೆಗಳು ಮತ್ತು

---

* ಅಕ್ಟೋಬರ್ 10ರ ಸಬ್ಬತ್ತಿನ ಸಿದ್ಧತೆಗಾಗಿ ಈ ವಾರದ ಪಾಠವನ್ನು ಅಧ್ಯಯನ ಮಾಡಿರಿ.

ತಾಯಂದಿರು, ದೇವರ ಆಜ್ಞೆ, ಆತನ ಗುಣದ ಅಭಿವ್ಯಕ್ತಿ ಎಂಬುದನ್ನು ತಿಳಿಸಿಕೊಡಬೇಕು. ಯಾವಾಗ ಮಕ್ಕಳು ದೇವರಾಜ್ಞೆಯ ತತ್ವಗಳನ್ನು ತಮ್ಮ ಹೃದಯಕ್ಕೆ ಆಹ್ವಾನಿಸಿಕೊಳ್ಳುವರೋ ಆಗ ಅವರ ಮನಸ್ಸು ಮತ್ತು ಆತ್ಮದ ಮೇಲೆ ದೇವರ ಸ್ವರೂಪ ಮೂಡುವುದು. ಅವರ ಬಹಳಷ್ಟು ಬೋಧನೆ ಮೌಖಿಕ. ಯುವಜನರು ಇಬ್ರಿಯ ಬರಹಗಳನ್ನು ಓದಲು ಕಲಿಯಬೇಕು. ಹಳೇ ಒಡಂಬಡಿಕೆಯ ಚರ್ಮಕಾಗದದ ಸುರುಳಿಗಳು ಅವರ ಅಧ್ಯಯನಕ್ಕೆ ಯಾವತ್ತೂ ತೆರೆದಿಡಲಾಗಿದೆ" – ಎಲೆನ್ ಜಿ ವೈಟ್, ದಿ ಡಿಸೈರ್ ಆಫ್ ಏಜಸ್, ಪುಟ 69.

ಮಾನವನ ಬಹಳಷ್ಟು ಇತಿಹಾಸದಲ್ಲಿ, ಶಿಕ್ಷಣ, ಬಹಳವಾಗಿ ಮನೆಯಲ್ಲೇ ನಡೆದಿರುವುದನ್ನೇ ಕಾಣುತ್ತೇವೆ. ಅದರಲ್ಲೂ ವಿಶೇಷವಾಗಿ, ಬಾಲ್ಯದ ಶಿಕ್ಷಣ ಗೃಹ ಶಿಕ್ಷಣವೇ ಆಗಿತ್ತು. ಕುಟುಂಬದಲ್ಲಿ ನಡೆಯುವ ಶಿಕ್ಷಣವನ್ನು ಕುರಿತು ಸತ್ಯವೇದ ಹೇಳುವುದೇನು? ನಮ್ಮ ಕುಟುಂಬದ ಸನ್ನಿವೇಶ ಏನೇ ಆಗಿರಲಿ, ಇಂತಹ ಶಿಕ್ಷಣದಿಂದ ನಾವು ಎಂತಹ ತತ್ವಗಳನ್ನು ನಮ್ಮೊಂದಿಗೆ ಕೊಂಡೊಯ್ಯಬಹುದು?

**ಭಾನುವಾರ** **ಅಕ್ಟೋಬರ್ 4**

## ಪ್ರಥಮ ಕುಟುಂಬ

ಧರ್ಮಶಾಸ್ತ್ರದ ಮೊದಲ ಪುಟಗಳಲ್ಲಿ, ಮಾನವ ಇತಿಹಾಸದ ಪ್ರಾರಂಭದ ದಿನಗಳಲ್ಲಿ, ಎಂತಹ ಕೌಟುಂಬಿಕ ಶಿಕ್ಷಣ ಕೊಡಲ್ಪಟ್ಟಿತು ಎಂಬುದಕ್ಕೆ ಯಾವ ವಿವರವೂ ನಿಜಕ್ಕೂ ಸಿಕ್ಕುವುದೇ ಇಲ್ಲ, ಆದರೆ ಆ ಕಾಲಕ್ಕೆ ಕುಟುಂಬ ರಚನೆಯೊಳಗೇ ಶಿಕ್ಷಣವು ನಡೆಯುತ್ತಿತ್ತು.

**"ಏದೆನ್‌ನಲ್ಲಿ ಸಂಸ್ಥಾಪನೆಗೊಂಡ ಶಿಕ್ಷಣ ವ್ಯವಸ್ಥೆ ಕುಟುಂಬ ಕೇಂದ್ರವಾಗಿತ್ತು. ಆದಾಮ, "ದೇವರ ಮಗನು" (ಲೂಕ 3:38). ದೇವರ ಮಕ್ಕಳು ತಮ್ಮ ತಂದೆಯಿಂದಲೇ ಬೋಧನೆಯನ್ನು ಕೇಳಿದ್ದರು. ಈ ಅರ್ಥದಲ್ಲಿ ಕುಟುಂಬವೇ ಒಂದು ಶಾಲೆಯಾಗಿತ್ತು" – ಎಲೆನ್ ಜಿ ವೈಟ್, ಎಜುಕೇಷನ್, ಪುಟ 33.**

ಆ ಕುಟುಂಬ ಶಾಲೆಯಲ್ಲಿ ಏನು ಕಲಿಸಲಾಯಿತು ಎಂಬುದು ನಮಗೆ ಖಚಿತವಾಗಿ ತಿಳಿದುಬಾರದಿದ್ದರೂ, ಖಂಡಿತವಾಗಿ ಅಲ್ಲಿ ಸೃಷ್ಟಿಯ ಅದ್ಭುತಗಳು,

ಪಾಪ ಮತ್ತು ಪಾಪೋತ್ತರದ ಜೀವನ ಹಾಗೂ ವಿಮೋಚನೆಯ ಯೋಜನೆಗಳನ್ನು ಕುರಿತು ಬೋಧನೆ ಹಾಗು ಕಲಿಕೆ ನಡೆದಿರಲಿಕ್ಕೂ ಸಾಕು.

ಈ ಕೆಳಗಿನ ವಾಕ್ಯಗಳು ಬೋಧಿಸುವುದೇನು? ಈ ಬೋಧನೆ ಆದಾಮ ಮತ್ತು ಹವ್ವಳು ತಮ್ಮ ಮಕ್ಕಳಿಗೆ ಕೊಟ್ಟ ಶಿಕ್ಷಣದ ಭಾಗವಾಗಿದ್ದು ಏಕೆ? ಆ.ಕಾ. 1:2; ಆ.ಕಾ. 3:1–15; 2 ಕೊರಿಂಥ 4:6; ಲೂಕ 10:27; ಗಲಾ 3:11; ಪ್ರಕ 22:12.

"ಈ ಭೂಮಿಯ ಆರಂಭದ ದಿನಗಳಲ್ಲಿ ಸಂಸ್ಥಾಪನೆಗೊಂಡ ಶಿಕ್ಷಣ ವ್ಯವಸ್ಥೆ, ಆ ನಂತರದ ಎಲ್ಲಾ ಕಾಲಕ್ಕೂ ಆ ವ್ಯವಸ್ಥೆಯೇ ಮಾನವನಿಗೆ ಒಂದು ಮಾದರಿಯ ವ್ಯವಸ್ಥೆಯಾಗಿದೆ. ವ್ಯವಸ್ಥೆಯ ತತ್ವಗಳ ಒಂದು ನಿದರ್ಶನವಾಗಿ, ನಮ್ಮ ಮೊದಲ ತಂದೆ–ತಾಯಿಯ ಮನೆಯಾದ ಏದೆನ್‌ನಲ್ಲಿ ಒಂದು ಮಾದರಿ ಶಾಲೆ ಸಂಸ್ಥಾಪನೆಗೊಂಡಿತು" – ಎಲೆನ್ ಜಿ ವೈಟ್, ಎಜುಕೇಷನ್, ಪುಟ 20.

ಕ್ರೈಸ್ತೀಯ ಶಿಕ್ಷಣ ಎಂಬುದು ಕುಟುಂಬದ ಮತ್ತು ಅದರ ಸದಸ್ಯರಿಗೆ ತತ್ವ, ಆರಾಧನೆ, ಬೋಧನೆ, ಅನ್ಯೋನ್ಯತೆ, ಸುವಾರ್ತೆ ಮತ್ತು ಸೇವೆಗೆ ಕುರಿತಂತೆ ಶಿಕ್ಷಣ ಕೊಡಲು ಇರುವ ಒಂದು ವಚನಬದ್ಧತೆ. ದೇವರ ಪ್ರೀತಿ ಮತ್ತು ವಾಗ್ದಾನಗಳಿಗೆ ಸಂಬಂಧಪಟ್ಟ ಹಾಗೆ ಕುಟುಂಬಸ್ಥರಿಗೆ ಸೇವೆ ಮಾಡುವ ಸ್ಥಳವೇ ಮನೆ. ಇಲ್ಲಿ ತಾನೇ, ಮಕ್ಕಳಿಗೆ ಯೇಸುಸ್ವಾಮಿಯನ್ನು ಅವರ ಕರ್ತನೂ ಮತ್ತು ರಕ್ಷಕನೂ ಹಾಗು ಸ್ನೇಹಿತನೆಂದು ಪರಿಚಯ ಮಾಡಿಕೊಡಲಾಗುವುದು. ಮನೆಯಲ್ಲಿ ತಾನೇ ಸತ್ಯವೇದವನ್ನು ದೇವರ ವಾಕ್ಯವೆಂದು ಎತ್ತಿಹಿಡಿಯಲಾಗುವುದು. ಪರಲೋಕದ ತಂದೆಯೊಂದಿಗಿನ ನಮ್ಮ ಸಂಬಂಧ ಎಷ್ಟು ಆರೋಗ್ಯಕರವಾದದ್ದು ಎಂಬ ಮಾದರಿಗೆ ಉದಾಹರಣೆ ಕುಟುಂಬವೇ ಆಗಿದೆ.

ಆ.ಕಾ 4:1–4ರಲ್ಲಿ ಕಾಯಿನ ಮತ್ತು ಹೇಬೆಲ ಇಬ್ಬರೂ ಕರ್ತನಿಗೆ ಕಾಣಿಕೆ ತೆಗೆದುಕೊಂಡು ಬಂದಿದ್ದರು. ಕಾಣಿಕೆಗಳ ಸಮರ್ಪಣೆಯ ಅರ್ಥ ಮತ್ತು ಪ್ರಾಮುಖ್ಯತೆಯನ್ನು ಅವರು ತಮ್ಮ ಕುಟುಂಬ ಶಿಕ್ಷಣದ ಮತ್ತು ರಕ್ಷಣೆಯ ಯೋಜನೆಯ ಒಂದು ಭಾಗವಾಗಿ ಕಲಿತಿರಬಹುದೆಂದು ಊಹಿಸಿಕೊಳ್ಳ

ಬಹುದಾಗಿದೆ. ಇದೇ ಸಮಯದಲ್ಲಿ ಒಂದು ಒಳ್ಳೇ ಶಿಕ್ಷಣ, ನಾವು ನಿರೀಕ್ಷಿಸಿದಂತಹ ಫಲಿತಾಂಶವನ್ನೇನು ಕೊಡುವುದಿಲ್ಲ ಎಂಬುದನ್ನು ಕಥೆಯೇ ತೋರಿಸಿಕೊಟ್ಟಿದೆ.

**ನಿಮ್ಮ ಮನೆಯ ಪರಿಸರ ಹೇಗೇ ಇರಲಿ, ಆ ಪರಿಸರವನ್ನು ಸತ್ಯದ ಬೋಧನೆ ಮತ್ತು ಆ ಬೋಧನೆಗೆ ತಕ್ಕಂಥ ಜೀವನ ನಡೆಸಲು ಏನೆಲ್ಲ ಆಯ್ಕೆಗಳನ್ನು ನೀವು ಮಾಡಬೇಕಾಗಬಹುದು?**

**ಸೋಮವಾರ** **ಅಕ್ಟೋಬರ್ 5**

## ಯೇಸುಕ್ರಿಸ್ತನ ಬಾಲ್ಯ

ಯೇಸು ಕ್ರಿಸ್ತನ ಬಾಲ್ಯದ ಬಗ್ಗೆ ಧರ್ಮಶಾಸ್ತ್ರ ಕೊಡುವ ವಿವರ ಬಹಳ ಕಡಿಮೆ. ಆತನ ಬಾಲ್ಯದ ಬಹುದಿನಗಳು ಗೌಪ್ಯವಾಗಿವೆ. ಆದಾಗ್ಯೂ, ಆತನ ಈ ಭೂಮಿಯ ಮೇಲಿನ ತಂದೆ-ತಾಯಿ, ಅಂದರೆ ಮರಿಯಳು ಮತ್ತು ಯೋಸೇಫನ ಗುಣ-ನಡವಳಿಕೆ ವಿಷಯದಲ್ಲಿ ಕೆಲವು ಬೆಳಕು ಚೆಲ್ಲಲಾಗಿದೆ. ಅವರನ್ನು ಕುರಿತು ನಾವು ಏನು ಕಲಿಯುತ್ತೇವೆಯೋ, ಆ ಕಲಿಕೆ, ಕ್ರಿಸ್ತನ ಬಾಲ್ಯ ಮತ್ತು ಆತನ ಆರಂಭಿಕ ಶಿಕ್ಷಣವನ್ನು ಕುರಿತು ವಿವರಿಸಲು ಸಹಾಯಮಾಡದು.

ಈ ಕೆಳಗಿನ ವಾಕ್ಯಗಳು ಮರಿಯಳು ಮತ್ತು ಯೋಸೇಫನನ್ನು ಕುರಿತು ನಮಗೆ ತಿಳಿಸುವುದೇನು? ಯೇಸು, ತನ್ನ ತಂದೆ-ತಾಯಿಗಳಿಂದ ಪಡೆದುಕೊಂಡ ಶಿಕ್ಷಣದ ಬಗ್ಗೆ ಅವು ನೀಡುವ ಒಳನೋಟವೇನು?

ಲೂಕ 1:26-38 ______________________________

______________________________

ಲೂಕ 1:46-55 ______________________________

______________________________

ಮತ್ತಾಯ 1:18-24 ______________________________

______________________________

ಈ ಮೇಲಿನ ವಾಕ್ಯಗಳ ಅಧ್ಯಯನದಿಂದ ಮರಿಯಳು ಮತ್ತು ಯೋಸೇಫನು ಪ್ರಾಮಾಣಿಕ ಯೂದರೆಂದೂ, ದೇವರ ಆಜ್ಞೆಗ್ಗಳಿಗೂ ಮತ್ತು ನಿಯಮಗಳಿಗೂ

ವಿಧೇಯರಾಗಿ ಜೀವಿಸಬಯಸುವರೆಂದೂ ತಿಳಿದುಬರುತ್ತದೆ. ಅಷ್ಟೇ ಏಕೆ, ಕರ್ತನು ಬಂದು ಅವರಿಗೆ ಮುಂದೆ ಏನೆಲ್ಲ ನಡೆಯಲಿದೆ ಎಂಬುದನ್ನು ತಿಳಿಸಿದಾಗ, ಅವರು ಪ್ರಾಮಾಣಿಕವಾಗಿ, ಆತನು ಹೇಳಿದಂತೆಯೇ ನಡೆದುಕೊಂಡರು.

"ಬಾಲಕನಾದ ಯೇಸು, ಯೆಹೂದಿಗಳ ಸಭಾಮಂದಿರ ನಡೆಸುವ ಶಾಲೆಗಳಿಂದ ಶಿಕ್ಷಣ ಪಡೆಯಲಿಲ್ಲ. ಆತನ ತಾಯಿಯೇ, ಆತನ ಪ್ರಪ್ರಥಮ ಮಾನವ ಗುರುವಾಗಿದ್ದಳು. ಆಕೆಯು ತುಟಿಗಳಿಂದಲೂ ಮತ್ತು ಪ್ರವಾದಿಗಳ ಸುರುಳಿಗಳಿಂದಲೂ, ಆತನು ಪರಲೋಕ ಕುರಿತ ವಿಷಯಗಳನ್ನು ಕಲಿತನು. ತಾನೇ, ಇಸ್ರಾಯೇಲ್ಯರಿಗಾಗಿ ಮೋಶೆಯೊಂದಿಗೆ ಮಾತಾಡಿದ ಮಾತುಗಳನ್ನು, ಮರಿಯಳ ತೊಡೆಯ ಮೇಲೆ ಮಲಗಿಕೊಂಡು ಕೇಳಿಸಿಕೊಳ್ಳುತ್ತಿದ್ದನು. ಬಾಲಕನಾಗಿದ್ದ ಯೇಸು, ತರುಣನಾಗಿ ಬೆಳೆದು ನಿಂತಾಗ, ಯೆಹೂದಿ ಗುರುಗಳ ನಡೆಸುವ ಶಾಲೆಗಳಿಗೂ ಹೋಗಲಿಲ್ಲ. ಅಂತಹ ಮೂಲಗಳಿಂದ ಶಿಕ್ಷಣ ಪಡೆಯಬೇಕಾದ ಅವಶ್ಯಕತೆಯೂ ಅವನಿಗಿರಲಿಲ್ಲ. ಯಾಕೆಂದರೆ ದೇವರೇ ಆತನ ಉಪಧ್ಯಾಯನಾಗಿದ್ದನು"– ಎಲೆನ್ ಜಿ ವೈಟ್, ದಿ ಡಿಸೈರ್ ಆಫ್ ಏಜಸ್, ಪುಟ 70.

ಮರಿಯಳು ಮತ್ತು ಯೋಸೇಫನು ಒಳ್ಳೇ ಮತ್ತು ಪ್ರಾಮಾಣಿಕ ಶಿಕ್ಷಕರಾಗಿದ್ದರು ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ, ಲೂಕ 2:41–50ರಲ್ಲಿ ಪ್ರಕಟಗೊಂಡ ಕಥೆಯ ಮೇರೆಗೆ, ಅವರಿಗೇ ಅವರ ಮಗನನ್ನು ಅಧೀನ ಮಾಡಿಕೊಳ್ಳಲಾಗಲಿಲ್ಲ. ಯಾಕೆಂದರೆ ಯೇಸು ಪಡೆದುಕೊಂಡಿದ್ದ ಜ್ಞಾನ ಮತ್ತು ವಿವೇಕಗಳು ಆತನಿಗೆ ತನ್ನ ತಂದೆಯಾದ ದೇವರಿಂದ ಪ್ರಾಪ್ತವಾಗಿತ್ತು.

**ಮೇಲಿನ ವೈಟಮ್ಮನವರ ಹೇಳಿಕೆಯನ್ನು ಮತ್ತೊಮ್ಮೆ ಓದಿಕೊಳ್ಳಿರಿ. ಬಾಲಕ ಯೇಸು, ಮರಿಯಳ ತೊಡೆಯ ಮೇಲೆ ಮಲಗಿ, ತಾನೇ ಹಿಂದೆ ಹೇಳಿದ ಮಾತುಗಳನ್ನು ಆಕೆಯಿಂದ ಕೇಳಿಸಿಕೊಂಡನು ಎಂದು ವೈಟಮ್ಮ ಬರೆದಿದ್ದಾರೆ. ಈ ಹೇಳಿಕೆಯಲ್ಲಿರುವ ಸತ್ಯದ ಗೂಢಾರ್ಥವನ್ನು ಭೇದಿಸುವುದು ಹೇಗೆ? ದೇವರ ಅಪ್ರತಿಮ ಪ್ರೀತಿಯನ್ನು ಕುರಿತು ಇದು ಹೇಳುವುದೇನು? ಅಧಃಪತನಗೊಂಡವರು ಮತ್ತು ಪಾಪಿಗಳು ಆದ ನಾವು ಈ ಸತ್ಯಕ್ಕೆ ಹೇಗೆ ಪ್ರತಿಕ್ರಿಯಿಸಬೇಕು?**

**ಮಂಗಳವಾರ** **ಅಕ್ಟೋಬರ್ 6**

## ಸಂವಹನ (ಸಂಪರ್ಕ)

ನಿಜವಾಗಿಯೂ ಹೇಳಬೇಕೆಂದರೆ, ಶಿಕ್ಷಣ ಯಾವ ಹಂತದಲ್ಲಿಯೂ ಒಂದು ಸಂವಹನ (ಒಂದು ಸಂಪರ್ಕ)ವೇ ಆಗಿದೆ. ಗುರುವಿನಲ್ಲಿ ಶಿಷ್ಯರಿಗೆ ತಿಳಿಸಿಕೊಡಬೇಕಾದ ಜ್ಞಾನ, ವಿವೇಕ, ಮಾಹಿತಿ, ಸತ್ಯಾಂಶಗಳೇ, ಇತ್ಯಾದಿಗಳು ಇರುತ್ತವೆ. ಯಾರಲ್ಲಿ ತಿಳಿಸಿಕೊಡಬೇಕಾದ ಜ್ಞಾನ ಸಂಪತ್ತು ಅಡಕವಾಗಿರುತ್ತದೆಯೋ ಅವರು ಮಾತ್ರ ಇತರರಿಗೆ ಸಂವಹನ ಮಾಡಲು ಶಕ್ತರಾಗಿರುತ್ತಾರೆ. ತಮಗೆ ತಿಳಿದಿದ್ದನ್ನು ಇತರರಿಗೆ ತಿಳಿಸಲಾರದೆ ಹೋದರೆ, ಕೊನೆಪಕ್ಷ ಬೋಧನೆ ಮಾಡಲಾಗದಿದ್ದರೆ, ಅವರ ಜ್ಞಾನಸಂಪತ್ತಿನಿಂದಾಗುವ ಒಳ್ಳೆಯದಾದರೂ ಏನು?

ಇನ್ನೊಂದು ಹಂತದಲ್ಲಿ, ಅದು ಏನೇ ಇರಲಿ, ಒಳ್ಳೇ ಬೋಧನೆಯ ಕೌಶಲ್ಯಗಳು, ಕೇವಲ ಸಂವಹನ ಸಾಮರ್ಥ್ಯ ಮಾತ್ರವಲ್ಲ. ಈ ಇಡೀ ಪ್ರಕ್ರಿಯೆಯಲ್ಲಿ ನಿರ್ಣಾಯಕ ಅಂಶವೇನೆಂದರೆ: ಸಂವಹನ, ಸಂಬಂಧಗಳನ್ನು ಕಟ್ಟಿಕೊಡುವಂತಿರಬೇಕು. "ಒಬ್ಬ ಒಳ್ಳೇ ಗುರು, ತನ್ನ ಶಿಷ್ಯರಿಗೆ ಕೆಲವು ವರದಾನ ಮಾಡಬೇಕು. ಅದು ಎಂಥಹ ಬೆಲೆಕಟ್ಟಲಾಗದಂತಹ ವರದಾನವೆಂದರೆ: ತನ್ನ ಸ್ವಂತ ಸಹವಾಸ/ ಒಡನಾಟವನ್ನೇ ಧಾರೆಯೆರೆಯಬೇಕು. ಅನುಕಂಪ ತೋರಿದರೆ ಮಾತ್ರ ನಾವು ಸ್ತ್ರೀ–ಪುರುಷರನ್ನು, ಮಕ್ಕಳು ಮತ್ತು ತರುಣ–ತರುಣಿಯರನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾದೀತು. ತುಂಬಾ ಪರಿಣಾಮಕಾರಿಯಾಗಿ ಪ್ರಯೋಜನವಾಗಬೇಕೆಂದು ಒಬ್ಬರನ್ನು ಇನ್ನೊಬ್ಬರು ಅರ್ಥ ಮಾಡಿಕೊಳ್ಳಬೇಕಾದ್ದು ತುಂಬಾ ಅವಶ್ಯ." – ಎಲೆನ್ ಜಿ ವೈಟ್, ಎಜುಕೇಷನ್, ಪುಟ 212.

ಇನ್ನೊಂದು ರೀತಿಯಲ್ಲಿ ಹೇಳಬೇಕೆಂದರೆ, ಒಳ್ಳೆಯ ಬೋಧನೆ ಭಾವನಾತ್ಮಕ ಮತ್ತು ವೈಯಕ್ತಿಕ ನೆಲೆಯಲ್ಲಿ ಕೆಲಸ ಮಾಡುತ್ತದೆ. ಕುಟುಂಬ ಒಂದು ಶಾಲೆಯಾಗಿ, ಇದು ಬಹಳ ಮುಖ್ಯ. ವಿದ್ಯಾರ್ಥಿ ಮತ್ತು ಶಿಕ್ಷಕರ ನಡುವೆ ಒಂದು ಒಳ್ಳೇ ಸಂಬಂಧ ಏರ್ಪಡಬೇಕು.

ಸಂಬಂಧಗಳು ಸಂವಹನದ ಮೂಲಕ ಸಂಸ್ಥಾಪಿಸಲ್ಪಡುತ್ತವೆ ಮತ್ತು ಬೆಳೆಸಲ್ಪಡುತ್ತವೆ. ಕ್ರೈಸ್ತರು ತಮ್ಮ ದೇವರೊಂದಿಗೆ ಸಂವಹನ ನಡೆಸದಿದ್ದಾಗ,

ಅಂದರೆ: ಸತ್ಯವೇದ ಪಾರಾಯಣ ಮಾಡದಿದ್ದರೆ ಅಥವಾ ಪ್ರಾರ್ಥನೆ ಮಾಡದಿದ್ದರೆ, ದೇವರೊಂದಿಗಿನ ಅವರ ಸಂಬಂಧ ನಿಲುಗಡೆಗೆ ಬಂದುಬಿಡುತ್ತದೆ. ಕುಟುಂಬ, ಕ್ರಿಸ್ತನ ಕೃಪೆಯಲ್ಲಿಯೂ ಮತ್ತು ಜ್ಞಾನದಲ್ಲಿಯೂ ಬೆಳೆಯಬೇಕಾದರೆ, ಕುಟುಂಬದವರಿಗೆ ದೈವಿಕ ಮಾರ್ಗದರ್ಶನ ಅವಶ್ಯಕತೆಯಿದೆ.

ಕೆಳಗಿನ ವಾಕ್ಯಗಳನ್ನು ಓದಿಕೊಳ್ಳಿರಿ. ಬಲವಾದ ಕುಟುಂಬ ಸಂಬಂಧಗಳನ್ನು ಕಟ್ಟುವುದು ಹೇಗೆ ಎಂಬ ವಿಷಯದಲ್ಲಿ ಅವರಿಂದ ನಾವು ಕಲಿಯಬಹುದಾದದ್ದು ಏನು? (ಕುಟುಂಬ ಸಂಬಂಧ ಮಾತ್ರವಲ್ಲ ಎಲ್ಲಾ ಸಂಬಂಧಗಳಿಗೂ ಈ ಪ್ರಶ್ನೆ ಅನ್ವಯವಾಗುತ್ತವೆ). ಕೀರ್ತನೆ 37:7–9; ಜ್ಞಾ 10:31,32; ಜ್ಞಾ 27:17; ಎಫೆಸ 4:15; 1 ಯೋಹಾನ 3:18; ತೀತ 3:1,2; ಯಾಕೋಬ 4:11.

---

---

ಸಮಯ ತೆಗೆದುಕೊಂಡು ಯೋಗ್ಯವಾದ ಸಂವಹನದ ಬೀಜಗಳನ್ನು ಬಿತ್ತುವುದು, ಕುಟುಂಬದ ಸದಸ್ಯರುಗಳನ್ನು ಕ್ರಿಸ್ತನೊಂದಿಗೆ ವೈಯಕ್ತಿಕ ಸಂಬಂಧ ಬೆಳೆಸಲು ಸಹಾಯ ಮಾಡುವುದು ಮಾತ್ರವಲ್ಲದೆ, ಕುಟುಂಬ ಸದಸ್ಯರುಗಳ ನಡುವೆಯೂ ಸುಮಧುರ ಸ್ನೇಹ–ಸಂಬಂಧಗಳನ್ನು ಪುಷ್ಟೀಕರಿಸಲೂ ಸಹಾಯ ಮಾಡುತ್ತದೆ. ಹೀಗೆ ಮಾಡುವುದರಿಂದ, ನಿಮ್ಮ ಮಕ್ಕಳು ಪ್ರಾಯಕ್ಕೆ ಬಂದಾಗ ಮತ್ತು ವಯಸ್ಕರಾದಾಗ ಮೊದಲೇ ನಿಮ್ಮಿಂದ ತೆರೆಯಲ್ಪಟ್ಟ ಸಂವಹನದ ಕಾಲುವೆ ಈಗ ಸುಲಲಿತವಾಗಿ ಹರಿಯುವುದನ್ನು ಕಂಡು ನೀವು ಸಂತೋಷ ಪಡುವಿರಿ. ನಿಮಗೆ ಮಕ್ಕಳಿಲ್ಲದಿದ್ದರೂ, ಈ ವಾಕ್ಯಗಳಲ್ಲಿ ಕಂಡುಕೊಂಡ ತತ್ವಗಳು ಎಲ್ಲಾ ವಿಧವಾದ ಸಂಬಂಧಗಳ ನಡುವೆಯೂ ಕೆಲಸ ಮಾಡುತ್ತದೆ.

**ನಾವು ಏನು ಸಂವಹನ ಮಾಡುತ್ತೇವೆಯೋ ಅದು ಮುಖ್ಯವಲ್ಲ, ಆದರೆ ಹೇಗೆ ಸಂವಹನ ಮಾಡುತ್ತೇವೆಯೋ ಅದೇ ಮುಖ್ಯ ಎಂಬ ಈ ಹೇಳಿಕೆಯನ್ನು ಕುರಿತು ಚಿಂತನೆ ನಡೆಸಿರಿ. ನೀವು ಹೇಳಬೇಕಾದ ಒಂದು ವಿಷಯವನ್ನು ಸರಿಯಾಗಿಯೇ ಹೇಳಿದ್ದೀರಿ. ಆದರೆ ನೀವು ಹೇಳಿದ ರೀತಿ ಸರಿಯಾಗಿಲ್ಲದ ಕಾರಣ, ನಿಮ್ಮ ಹೇಳಿಕೆ ಯಾವ ಪರಿಣಾಮವನ್ನು ಬೀರಲಿಲ್ಲ. ಇಂತಹ ಸನ್ನಿವೇಶದಿಂದ ನೀವು ಕಲಿತದ್ದು ಏನು?**

**ಬುಧವಾರ** **ಅಕ್ಟೋಬರ್ 7**

## ತಂದೆ-ತಾಯಿಗಳ ಪಾತ್ರ

**"ತಂದೆಗಳೇ, ನಿಮ್ಮ ಮಕ್ಕಳಿಗೆ ಕೋಪವನೆಬ್ಬಿಸದೆ ಕರ್ತನಿಗೆ ಮೆಚ್ಚಿಗೆಯಾಗಿರುವ ಬಾಲಶಿಕ್ಷೆಯನ್ನೂ ಬಾಲೋಪದೇಶವನ್ನೂ ಮಾಡುತ್ತಾ ಅವರನ್ನು ಸಾಕಿ ಸಲಹಿರಿ" ಎಫೆಸ 6:4.**

**"ಗುಣವತಿಯಾದ ಸತಿಯು ಎಲ್ಲಿ ಸಿಕ್ಕಾಳು? ಆಕೆಯು ಹವಳಕ್ಕಿಂತಲೂ ಬಹು ಅಮೂಲ್ಯಳು." (ಜ್ಞಾ 31:10).**

ತಂದೆ ತಾಯಿಗಳಿಗೆ ಬಹಳ ಗಂಭೀರವಾದ ಜವಾಬ್ದಾರಿಗಳಿರುತ್ತವೆ. ತಂದೆ ಕುಟುಂಬದ ಯಜಮಾನ. ಕುಟುಂಬ-ಸಭೆ, ಶಾಲೆ ಮತ್ತು ಸಮಾಜದ ಶಿಶುವಿಹಾರ. ತಂದೆ ಬಲಹೀನನಾಗಿದ್ದರೆ ಬೇಜವಾಬ್ದಾರಿಯು ಮನುಷ್ಯನಾಗಿದ್ದರೆ, ಅಯೋಗ್ಯನಾಗಿದ್ದರೆ, ಅದರ ದುಷ್ಪರಿಣಾಮ ಆಗುವುದು ಕುಟುಂಬ, ಸಭೆ, ಶಾಲೆ ಮತ್ತು ಸಮಾಜದ ಮೇಲೆ. ತಂದೆಗಳು ಪವಿತ್ರಾತ್ಮನ ಫಲಗಳು ತಮ್ಮಲ್ಲಿರುವುದನ್ನು ಪ್ರದರ್ಶಿಸಬೇಕಾಗುತ್ತದೆ. ಅವು ಯಾವುವು ಎಂದರೆ: **"ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾಧುತ್ವ"** (ಗಲಾತ್ಯ 5:22,23).

ಎಲ್ಲಾ ಸಮಾಜಗಳಲ್ಲೂ, ತಾಯಂದಿರಿಗೆ ಬಹುಮುಖ್ಯವಾದ ಪಾತ್ರವಿದೆ. ತಮ್ಮ ಮಕ್ಕಳ ನಡತೆಯನ್ನು ರೂಪಿಸುವ ನಿಟ್ಟಿನಲ್ಲಿ ತಾಯಂದಿರು ಅವರ ಮೇಲೆ ಬಲವಾದ ಪ್ರಭಾವ ಬೀರುತ್ತಾರೆ. ತಮ್ಮ ಮನೆಯ ಮನಃಸ್ಥಿತಿ ಮತ್ತು ಶಾಂತ-ಸಮಾಧಾನದ ಸ್ವಭಾವಗಳನ್ನು ಹುಟ್ಟುಹಾಕುವವರೂ ಅವರೇ. ಮಕ್ಕಳಿಗೆ ಶಿಕ್ಷಣ ಕೊಡುವ ನಿಟ್ಟಿನಲ್ಲಿ ತಾಯಂದಿರಿಗೆ ತಂದೆಗಳು ಯಾವೆಲ್ಲ ರೀತಿಯಲ್ಲಿ ಸಹಕಾರ ಕೊಡಬೇಕೋ ಅದನ್ನು ತಪ್ಪದೆ ಕೊಡಲಿ.

**ಈ ಕೆಳಗಿನ ವೇದವಾಕ್ಯಗಳಿಂದ ತಂದೆ-ತಾಯಂದಿರು ಕಲಿಯಬಹುದಾದ್ದೇನು?**

ಎಫೆಸ 5:22,23,25,26; 1 ಕೊರಿಂಥ 11:3; 2 ಕೊರಿಂಥ 6:14; ರೋಮ 3:13,14; 2 ಪೇತ್ರ 1:5-7; ಫಿಲಿಪ್ಪಿ 4:8.

ತಂದೆ–ತಾಯಂದಿರು, ತಮ್ಮ ನಡೆ–ನುಡಿಯಿಂದ ಸತ್ಯವೇದಾಧಾರಿತ ಕ್ರಿಸ್ತನನ್ನು ಮತ್ತು ಸಭೆಯನ್ನು ತಮ್ಮ ಮಕ್ಕಳಿಗೆ ಒದಗಿಸುವ ನೈತಿಕ ಹಂಗಿನಲ್ಲಿದ್ದಾರೆ. ಮದುವೆಯ ಸಂಬಂಧವು, ಕ್ರಿಸ್ತನು ಮತ್ತು ಸಭೆಗೂ ಇರುವ ಸಂಬಂಧ ಸಾದೃಶ್ಯವಾಗಿದೆ. ತಂದೆ–ತಾಯಿ, ತಮ್ಮ ಕುಟುಂಬವನ್ನು ಕೈಹಿಡಿದು ನಡೆಸಲು ನಿರಾಕರಿಸಿದರೆ ಅಥವಾ ತಮ್ಮ ಕುಟುಂಬವನ್ನು ದಬ್ಬಾಳಿಕೆಯಿಂದ ನಡೆಸಿದರೆ, ಆಗ, ಅವರು ತಮ್ಮ ಮಕ್ಕಳಿಗೂ ಮತ್ತು ಹೊರಗಿನ ಪ್ರಪಂಚಕ್ಕೂ ಕ್ರಿಸ್ತನನ್ನು ತಪ್ಪಾಗಿ ಪ್ರತಿನಿಧಿಸುವವರಾಗಿದ್ದಾರೆ. ದೇವರು, ತಂದೆ–ತಾಯಂದಿರು ತಮ್ಮ ಮಕ್ಕಳಿಗೆ ಬಹು ಪರಿಶ್ರಮದಿಂದ ಬೋಧನೆ ಮಾಡಬೇಕೆಂದು ಹೇಳಿದ್ದಾನೆ (ಧ.ಕಾ 6:7). ತಂದೆ–ತಾಯಂದಿರು ತಮ್ಮ ಮಕ್ಕಳು ದೇವರನ್ನು ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ ಮತ್ತು ಪೂರ್ಣ ಶಕ್ತಿಯಿಂದಲೂ ಪ್ರೀತಿಸುವುದನ್ನು ಕಲಿಸಬೇಕು. ದೇವರು ಭಯ, ಪ್ರೀತಿಯ ಆರಾಧನೆ ಮತ್ತು ದೇವರಿಗೆ ತಮ್ಮನ್ನು ಒಪ್ಪಿಸಿಕೊಡುವುದನ್ನೂ ಸಹ, ತಂದೆ–ತಾಯಂದಿರೇ ಕಲಿಸಿಕೊಡಬೇಕಾಗಿದೆ.

ಧ.ಕಾ. 6:7ರಲ್ಲಿ, ಇಸ್ರಾಯೇಲ್ ಜನರಿಗೆ ದೇವರು ಮಾಡಿದ ಅದ್ಭುತ ಕಾರ್ಯಗಳನ್ನು ಅವರು ತಮ್ಮ ಮಕ್ಕಳಿಗೆ ಹೇಳಿಕೊಡುವುದಕ್ಕೆ ಬೇಕಾದ ಎಲ್ಲಾ ಉದ್ದೇಶಗಳನ್ನು ಕೊಡಲಾಗಿದೆ. ಹಾಗೆಯೇ, ಆ ಕಥೆ ಎಷ್ಟೇ ದೊಡ್ಡದಾಗಿದ್ದರೂ ಹಿರಿಯರು ತಮ್ಮ ಮಕ್ಕಳಿಗೆ ಅದನ್ನು ಹೇಳಿಕೊಡಲೇ ಬೇಕಾಗಿದೆ. ಅದೇ ರೀತಿಯಲ್ಲಿ ಕ್ರಿಸ್ತನ ಶಿಲುಬೆಯ ಮರಣಾನಂತರ ಜೀವಿಸಿರುವ ನಾವೂ ಸಹ, ಕ್ರಿಸ್ತನ ಚರಿತ್ರೆಯನ್ನು ನಮ್ಮ ಮಕ್ಕಳಿಗೆ ಬೋಧಿಸಬೇಕಲ್ಲವೇ?

ನಾವು ನಮ್ಮ ಮಕ್ಕಳಿಗೆ ಕೊಡಬೇಕಾದ ತರಬೇತಿಗಳು ಸತತವಾಗಿ ಕೂಡಲ್ಪಡುತ್ತಿರಲಿ. ಈ ತರಬೇತಿಯಲ್ಲಿ ದೇವರ ಕುರಿತ ಸತ್ಯವನ್ನು ಮಕ್ಕಳಿಗೆ ಉಣಬಡಿಸೋಣ. ಕ್ರಿಸ್ತನೊಂದಿಗೆ ಸ್ವತಃ ಅವರೇ ಸಂಬಂಧ ಬೆಳೆಯಿಸಿಕೊಳ್ಳಲು ಅವರನ್ನು ಸಿದ್ಧಪಡಿಸೋಣ.

ಕೊನೆಗೆ, ನಾವು ನಮ್ಮ ಮಕ್ಕಳಿಗೆ ಕೊಡಬೇಕಾದ ಪವಿತ್ರ ವರದಾನಗಳನ್ನು ಉಚಿತವಾಗಿ ಕೊಟ್ಟುಬಿಟ್ಟಿದ್ದೇವೆ. ಆದ್ದರಿಂದ ನಮ್ಮ ಮಕ್ಕಳು ವಯಸ್ಕರಾದಾಗ, ದೇವರ ಮುಂದೆ ತಾವೇ ಉತ್ತರಕೊಡಬೇಕಾಗುತ್ತದೆ.

**ಗುರುವಾರ** **ಅಕ್ಟೋಬರ್ 8**

## ನೀವು ಮರೆಯಬಾರದು

ಇಸ್ರಾಯೇಲ್ಯರು ವಾಗ್ದತ್ತ ದೇಶವನ್ನು ಪ್ರವೇಶಿಸುವ ಮುನ್ನ ಮೋಶೆ ಅವರೊಂದಿಗೆ ದೇವರು ಅದ್ಭುತವಾದ ರೀತಿಯಲ್ಲಿ ಅವರನ್ನು ಕೈಹಿಡಿದು ನಡೆಯಿಸಿಕೊಂಡು ಬಂದದ್ದನ್ನು ಕುರಿತು ಮತ್ತೆ ಮಾತಾಡಿದ್ದನು. ದೇವರು ಅವರ ಮಧ್ಯದಲ್ಲಿದ್ದುಕೊಂಡು ಅವರನ್ನು ಕೈಹಿಡಿದು ನಡೆಸಿದ ರೀತಿಯನ್ನು ಮರೆಯಬಾರದೆಂದು ಮತ್ತೆಮತ್ತೆ ಮೊಶೆ ಇಸ್ರಾಯೇಲ್ಯರಿಗೆ ಒತ್ತಿಒತ್ತಿ ಹೇಳಿದ್ದನು. ಅನೇಕ ರೀತಿಯಲ್ಲಿ ಧರ್ಮೋಪದೇಶಕಾಂಡ ಮೋಶೆಯ ಕೊನೆಯ ಮರಣ ಪತ್ರವೂ ಮತ್ತು ಸಾಕ್ಷಿಯೂ ಹೌದು. ಸಾವಿರಾರು ವರ್ಷಗಳ ಹಿಂದೆ ಬರೆಯಲ್ಪಟ್ಟಿದ್ದರೂ, ಇಂದಿಗೆ ಹೋಲಿಸಿದರೆ ಅಂದಿನ ಸಂಸ್ಕೃತಿ ಮತ್ತು ಜೀವನ ಶೈಲಿ ಸಂಪೂರ್ಣವಾಗಿ ಭಿನ್ನವಾಗಿತ್ತು. ಅಂದು ಅನ್ವಯವಾಗಿದ್ದ ತತ್ವಗಳು ಇಂದಿಗೂ ನಮಗೆ ಅನ್ವಯವಾಗುತ್ತವೆ.

**ಧರ್ಮೋಪದೇಶಕಾಂಡದ 6ನೇ ಅಧ್ಯಾಯವನ್ನು ಓದಿಕೊಳ್ಳಿರಿ. ಈ ಅಧ್ಯಾಯದಲ್ಲಿ ಕ್ರೈಸ್ತ ಶಿಕ್ಷಣ ತತ್ವಗಳಿಗೆ ಸಂಬಂಧಪಟ್ಟಂತೆ ನಾವು ಇಲ್ಲಿ ಕಲಿತುಕೊಳ್ಳಬೇಕಾದದ್ದೇನು? ನಮ್ಮ ಮಕ್ಕಳಿಗೆ ಮಾತ್ರವಲ್ಲ, ದೇವರ ಬಗ್ಗೆ ಮತ್ತು ರಕ್ಷಣೆಗೆ ಸಂಬಂಧಿಸಿದಂತೆ ಆತನ ಮಹಾನ್ ಕಾರ್ಯಗಳ ವಿಷಯದಲ್ಲಿ ನಮಗೆ ಗೊತ್ತಿರುವ ಸಂಗತಿಗಳನ್ನು ನಮ್ಮ ಮಕ್ಕಳಿಗೆ ಮಾತ್ರವಲ್ಲ, ಗೊತ್ತಿಲ್ಲದವರಿಗೂ ತಿಳಿಸಿಕೊಡುವ ನಮ್ಮ ಬೋಧನೆಯಲ್ಲಿ ಕೇಂದ್ರಬಿಂದು ಏನಾಗಿರಬೇಕು? ಅದೇ ಸಂದರ್ಭದಲ್ಲಿ, ಈ ವಚನಗಳಲ್ಲಿ ಕಂಡುಬಂದ ಎಚ್ಚರಿಕೆಗಳಾವುವು?**

---

---

ಇಸ್ರಾಯೇಲ್ಯರ ಮಧ್ಯದಲ್ಲಿ ದೇವರು ನಡೆಯಿಸಿದ ಅದ್ಭುತ ಕಾರ್ಯಗಳು, ಅವರು ತಮ್ಮ ಮಕ್ಕಳಿಗೆ ಕಲಿಸುವ ಶಿಕ್ಷಣದ ಕೇಂದ್ರಬಿಂದುವಾಗಿತ್ತು. ದೇವರು

ಅವರಿಗೆ ಮಾಡಿದ ಈ ಅದ್ಭುತ ಕಾರ್ಯಗಳನ್ನು ಮರೆಯಲೇಬಾರದು ಎಂಬ ಎಚ್ಚರಿಕೆ ಸಹ ಕೊಡಲಾಗಿತ್ತು.

ಮಕ್ಕಳ ಜೀವನಕ್ಕೆ ಸತ್ಯವೇದ ಬೋಧನೆಗಳನ್ನು ಸಮಗ್ರವಾಗಿ ಕೊಡಲು ತಂದೆ–ತಾಯಂದಿರು ಪ್ರಮುಖ ಪಾತ್ರ ವಹಿಸುವುದಾದರೆ, ಅವರು ತಮ್ಮ ಮಕ್ಕಳೊಂದಿಗೆ ಹಂಚಿಕೊಳ್ಳಲು ಸಾಕಷ್ಟು ಜ್ಞಾನ ಮತ್ತು ಸಮಯವನ್ನು ಪಡೆದುಕೊಂಡು, ತಮ್ಮ ಜೀವನವನ್ನು ಆ ನಿಟ್ಟಿನಲ್ಲಿ ವ್ಯವಸ್ಥೆಗೊಳ್ಳುವ ಮತ್ತು ಸಿದ್ಧತೆ ಮಾಡಿಕೊಳ್ಳುವ ಜವಾಬ್ದಾರಿಯೂ ಅವರದೇ ಆಗಿರುತ್ತದೆ.

"ಮಗುವಿನ ಮೊದಲ ಗುರು ತಾಯಿ. ಮನಸ್ಸಿನ ಮೇಲೆ ಬಹುದೊಡ್ಡ ಪರಿಣಾಮ ಉಂಟಾಗುತ್ತಿರುವ ಮತ್ತು ಬಹಳ ವೇಗವಾಗಿ ಮನಸ್ಸು ವಿಕಾಸವಾಗುತ್ತಿರುವ ಅವಧಿಯಲ್ಲಿ, ಮಗುವಿನ ಶಿಕ್ಷಣ ಬಹುಪಾಲು ತಾಯಿಯ ಕೈಯಲ್ಲಿರುತ್ತದೆ" – ಎಲೆನ್ ಜಿ ವೈಟ್, ಎಜುಕೇಷನ್, ಪುಟ 275.

ತಮ್ಮ ಮಕ್ಕಳಿಗೆ ದೇವರ ಪ್ರೀತಿ ಮತ್ತು ಆತನ ವಾಗ್ದಾನಗಳನ್ನು ಕುರಿತು ಹೇಳಿಕೊಡಲು ತಂದೆ–ತಾಯಂದಿರು ಮಾಡಿಕೊಳ್ಳುವ ಸಮಯವಿದೆಯಲ್ಲ ಅದು ಅತ್ಯವಶ್ಯಕವಾಗಿ ಅವರ ಜೀವನದಲ್ಲಿ ಇರಲೇಬೇಕಾದ ಸಮಯವಾಗಿದೆ. ನಿಮ್ಮ ಮಕ್ಕಳಿಗೆ ದೇವರ ವಾಗ್ದಾನಗಳು ಹಾಗು ಆತನ ಪ್ರೀತಿಯನ್ನು ಹೇಳಿಕೊಡಲು ಗೊತ್ತು ಮಾಡಿಕೊಳ್ಳುವ ವೈಯಕ್ತಿಕ ಸಮಯವಿದೆಯಲ್ಲ, ಆ ಸಮಯ, ನಿಮ್ಮ ಕುಟುಂಬದ ಮೇಲೆ ಧನಾತ್ಮಕ ಪರಿಣಾಮವನ್ನು ಅನೇಕ ಸಂತತಿಯವರೆಗೆ ಕೊಂಡೊಯ್ಯಬಹುದು.

**"ಇವುಗಳನ್ನು ನಿಮ್ಮ ಮಕ್ಕಳಿಗೆ ಅಭ್ಯಾಸ ಮಾಡಿಸಿ ಮನೆಯಲ್ಲಿ ಕೂತಿರುವಾಗಲೂ ದಾರಿನಡೆಯುವಾಗಲೂ ಮಲಗುವಾಗಲೂ ಏಳುವಾಗಲೂ ಇವುಗಳ ವಿಷಯದಲ್ಲಿ ಮಾತಾಡಬೇಕು" (ಧ.ಕಾ 6:7) – ಈ ವಾಕ್ಯವನ್ನು ಓದಿಕೊಳ್ಳಿರಿ. ಇಲ್ಲಿನ ಮುಖ್ಯಾಂಶವೇನು? ನಮ್ಮ ಮಕ್ಕಳನ್ನು ಮಾತ್ರವಲ್ಲ, ನಮ್ಮನ್ನು ಸೇರಿದಂತೆ, ನಮ್ಮ ದೇವರ ವಾಸ್ತವತೆಯನ್ನು ಯಾವಾಗಲೂ ಎತ್ತಿಹಿಡಿಯುವ ವಿಷಯದಲ್ಲಿ ಈ ವಾಕ್ಯ ಹೇಳುವುದೇನು?**

**ಶುಕ್ರವಾರ** **ಅಕ್ಟೋಬರ್ 9**

**ಹೆಚ್ಚಿನ ಅಧ್ಯಯನ : ಎಲೆನ್ ಜಿ ವೈಟ್ ಅಮ್ಮನವರ, ಎಜುಕೇಷನ್ ಪುಸ್ತಕದಲ್ಲಿ, "ಪ್ರಿಪರೇಷನ್" ಎಂಬ ಅಧ್ಯಾಯ (ಪುಟ 275–282); ಕೋ–ಆಪರೇಷನ್" ಎಂಬ ಅಧ್ಯಾಯ (ಪುಟ 283–286) ಮತ್ತು "ಡಿಸಿಪ್ಲಿನ್" ಎಂಬ ಅಧ್ಯಾಯಗಳನ್ನು (ಪುಟ 287–297) ಓದಿಕೊಳ್ಳಿರಿ.**

ಮಗುವಿನ ಬಾಲ್ಯದ ಮತ್ತು ನಂತರದ ಶಿಕ್ಷಣ ತರಬೇತಿಗಳು ತಂದೆ–ತಾಯಂದಿರ ಜವಾಬ್ದಾರಿಯಾಗಿರುತ್ತದೆ. ಮಕ್ಕಳಿಂದ ತಂದೆ–ತಾಯಿಗಳೀರ್ವರಿಗೂ ಬರುವ ಜಾಗರೂಕತೆಯ ಮತ್ತು ಪೂರ್ಣ ಸಿದ್ಧತೆಯ ಬೇಡಿಕೆ ತುಂಬಾ ತುರ್ತಿನದಾಗಿರುತ್ತದೆ. ಪುರುಷ ಮತ್ತು ಸ್ತ್ರೀ, ತಂದೆತನ ಹಾಗು ತಾಯಿತನ ಪಡೆದುಕೊಳ್ಳುವ ಸಾಧ್ಯತೆ ಬರುವ ಮುನ್ನ, ದೈಹಿಕ ವಿಕಾಸದ ನಿಯಮಗಳನ್ನು ಚೆನ್ನಾಗಿ ಪರಿಚಯ ಮಾಡಿಕೊಳ್ಳಲಿ..... ಅಷ್ಟು ಮಾತ್ರವಲ್ಲ ಅವರು ಮಾನಸಿಕ ವಿಕಾಸ ಹಾಗು ನೈತಿಕ ತರಬೇತಿಯ ನಿಯಮಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲಿ" – ಎಲೆನ್ ಜಿ ವೈಟ್, ಎಜುಕೇಷನ್, ಪುಟ 276.

"ಕೌಟುಂಬಿಕ ಜೀವನದಲ್ಲಿ ಸಹಕಾರ ಮನೋಭಾವದ ಕೆಲಸ ಮೊದಲಿಗೆ ತಂದೆ–ತಾಯಂದಿರಿಂದಲೇ ಪ್ರಾರಂಭವಾಗಲಿ. ಮಕ್ಕಳ ತರಬೇತಿಯಲ್ಲಿ ಅವರಿಬ್ಬರದು ಜಂಟಿ ಜವಾಬ್ದಾರಿ. ಸತತವಾಗಿ ಅವರು ಒಂದಾಗಿರಲು ಪ್ರಯತ್ನಿಸಬೇಕು. ಇಬ್ಬರು ಸಹಾಯಕ್ಕಾಗಿ ದೇವರ ಬಳಿಸಾರಲಿ ..... ಇಂತಹ ತರಬೇತಿ ಕೊಡುವ ತಂದೆ–ತಾಯಂದಿರು, ಮಕ್ಕಳ ಶಿಕ್ಷಕ–ಶಿಕ್ಷಕಿಯರನ್ನು ಕಟುವಾಗಿ ಟೀಕಿಸುವುದಿಲ್ಲ. ಮಕ್ಕಳ ಆಸಕ್ತಿ ಮತ್ತು ಶಾಲೆಯ ನ್ಯಾಯಯುತ ಸೇವೆ ತಂದೆ–ತಾಯಂದಿರ ಜವಾಬ್ದಾರಿಯನ್ನು ಬೇಡುತ್ತವೆ" – ಎಲೆನ್ ಜಿ ವೈಟ್, ಎಜುಕೇಷನ್, ಪುಟ 283.

## ಚರ್ಚಿಸಬೇಕಾದ ಪ್ರಶ್ನೆಗಳು

1. ನಮಗೆ ಮಕ್ಕಳು ಇರಲಿ ಅಥವಾ ಇಲ್ಲದಿರಲಿ, ನಮಗೆ ಬದುಕಲಿಕ್ಕೊಂದು ವಾಸಸ್ಥಳವಿರುತ್ತದೆ, ಮತ್ತು ನಾವೆಲ್ಲ ಬೇರೆಯುವರೊಂದಿಗೆ ಒಡನಾಡುತ್ತಿರುತ್ತೇವೆ. ನೀವು ವಾಸಮಾಡುತ್ತಿರುವ ಸ್ಥಳದಲ್ಲಿ ಅಥವಾ

ಇನ್ನೆಲ್ಲಿಯಾದರೂ ಸರಿ ಇತರರೊಂದಿಗೆ ಒಡನಾಡುವುದಕ್ಕೆ ಅಥವಾ ಸಾಕ್ಷಿ ಕೊಡುವುದಕ್ಕೆ ಸಹಾಯ ಮಾಡುವಂತೆ ಈ ವಾರದ ಪಾಠದಲ್ಲಿ ಕಲಿತ್ತಿದ್ದೇನು?

2. ಶಿಕ್ಷಣವನ್ನು ನಾವು ಒಳ್ಳೇ ದೃಷ್ಟಿಯಿಂದಲೇ ನೋಡುತ್ತೇವೆ. [ಶಿಕ್ಷಣವನ್ನು ಯಾರು ತಾನೇ ಧಿಕ್ಕರಿಸುವರು] ಈ ದೃಷ್ಟಿಕೋನ ಯಾವಾಗಲೂ ಇದ್ದುಕೊಂಡು ಬಂದಿದೆಯೇ? ಶಿಕ್ಷಣ ತಪ್ಪು ದಾರಿ ಹಿಡಿದಿದೆ ಮತ್ತು ಕೆಟ್ಟ ಶಿಕ್ಷಣ ಎನಿಸಿಕೊಂಡಿದೆ ಎಂಬುದಕ್ಕೆ ನೀವು ಕೊಡುವ ಉದಾಹರಣೆಗಳು ಯಾವುವು? ಈ ಋಣಾತ್ಮಕ ಉದಾಹರಣೆಗಳಿಂದ, ಶಿಕ್ಷಣವನ್ನು ಸರಿಪಡಿಸಲು ಸಹಾಯ ಮಾಡುವ ಅಂಶಗಳಾವುವು/

3. ಬುಧವಾರದ ಅಧ್ಯಯನದಲ್ಲಿ ಹೇಳಿದಂತೆ, ನಮಗೆಲ್ಲ ಉಚಿತವಾಗಿ ಪವಿತ್ರವಾದ ವರದಾನಗಳನ್ನು ಕೊಡಲಾಗಿದೆ. ಶೀಘ್ರದಲ್ಲಿ ಅಥವಾ ನಂತರದಲ್ಲಿ, ಮಕ್ಕಳು ಪ್ರೌಢರಾಗುವರು. ಈಗ ಅವರು ತಮ್ಮ ಬಾಲ್ಯದಿಂದ ಕಲಿತು ಬಂದ ದೇವರ ವಿಷಯದಲ್ಲಿ ತಮ್ಮದೇ ಆದ ತೀರ್ಮಾನ ಮಾಡಬೇಕಾಗಿ ಬರುತ್ತದೆ. ತಂದೆ–ತಾಯಂದಿರಾಗಲಿ ಅಥವಾ ಬೇರೆ ಯಾರೇ ಆಗಲಿ, ಬೇರೆಯವರಿಗೆ ಸಾಕ್ಷಿ ಕೊಡುವಾಗ ಮತ್ತು ಇತರರಿಗೆ ಸುವಾರ್ತೆ ಸಾರುವಾಗ ದೇವರು ನಮಗೆ ಕೊಟ್ಟಿರುವ ಆಯ್ಕೆಯ ಸ್ವಾತಂತ್ರ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡಬೇಕು ಏಕೆ?